



ಅರುಣ ಪಿ. ಭಟ್ಟ

## ವಾರಭವಿಷ್ಯ: 29.7.2021ರಿಂದ 04.08.2021ರವರೆಗೆ




ಅರ್ಧಕ್ಕೆ ನಿಂತ ಕೆಲಸಗಳು ಮುಂದುವರೆಯುತ್ತವೆ. ನಿಮ್ಮ ಕೆಲಸ ಬಂಧುಗಳಲ್ಲಿ ಸದ್ಭಾವನೆ ಮೂಡಿಸುವುದು. ನೆಗಡಿ ಶೀತ ಜ್ವರದಿಂದ ಕೊಂಚ ತೊಂದರೆಯಾಗುತ್ತದೆ. ವಾಹನ ಸೌಖ್ಯ ಸಣ್ಣ ಪುಟ್ಟ ವ್ಯಾಪಾರದಲ್ಲಿ ಲಾಭ. ತಾಯಿಗೆ ಅನುಕೂಲ. ನೀರಿನ ಸಮಸ್ಯೆ ಬಗೆಹರಿಯುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ಶುಭದಿನ 1. ಮಾರುತಿ ಪೂಜೆ ಪ್ರಾರ್ಥನೆ ಮಾಡಿರಿ.




ಪ್ರಾರಂಭದಲ್ಲೇ ವಿಶೇಷ ವಸ್ತು ಖರೀದಿ ಮಾಡಲಿದ್ದೀರಿ. ದಂಪತಿಯ ಆರೋಗ್ಯ ಸ್ಥಿರವಾಗಿರುವುದು. ಸ್ಪರ್ಧಾತ್ಮಕತೆಯಲ್ಲಿ ಯಶಸ್ಸು ನಿಮಗೆ ಸಿಗಲಿದೆ. ಯಂತ್ರ ಮತ್ತು ವಾಹನಗಳಲ್ಲಿ ಸಮಸ್ಯೆ ಉಂಟಾಗಲಿದೆ. ಬಂಧು ವರ್ಗದಲ್ಲಿ ವೈಮನಸ್ಸು ಸಾಧ್ಯತೆ. ಕುಟುಂಬಕ್ಕಾಗಿ ಅಧಿಕ ಖರ್ಚು ಮಾಡಬೇಕಾಗಬಹುದು. ಚಿಕ್ಕ ಪ್ರವಾಸ ಹೋಗುವ ಸಾಧ್ಯತೆ ಇದೆ. ಶುಭದಿನ 2. ಗಣಪತಿ ಸುಬ್ರಮಣ್ಯ ಜಪ ಮಾಡಿರಿ.




ಹಲವು ದಿನಗಳ ಕೌಟುಂಬಿಕ ಸಮಸ್ಯೆಗಳು ಬಗೆಹರಿಯುವುವು. ನಿಮಗೆ ಹೊಸ ಸೇವಕರು ಸಿಗುತ್ತಾರೆ. ಕೈಯಲ್ಲಿ ನೋವು ಕಾಣಿಸುವ ಸಂಭವವಿದೆ. ಬಂಧುಗಳಿಂದ ವಿರೋಧವನ್ನು ಎದುರಿಸಬೇಕಾಗುತ್ತದೆ. ವಾರಾಂತ್ಯದಲ್ಲಿ ಸಣ್ಣ ಪ್ರವಾಸ. ವ್ಯಾಪಾರದಲ್ಲಿ ನಷ್ಟ ಸಂಭವಿಸಬಹುದು ಎಚ್ಚರಿಕೆ ಒಳ್ಳೆಯದು. ವಿನಾಕಾರಣ ಹೆದರಿಕೆ ಆಗಬಹುದು. ವಾಗ್ಯುದ್ಧದಲ್ಲಿ ಗೆಲುವು. ಶುಭದಿನ 2. ಶನಿಸ್ತೋತ್ರ ಪಠಣ ಮಾಡಿರಿ.




ಆರೋಗ್ಯದಲ್ಲಿ ಸುಧಾರಣೆ ಕಾಣಿಸುವುದು. ಆಕಸ್ಮಿಕ ಖರ್ಚು ಹೆಚ್ಚಾಗುವ ಸಂಭವವಿದೆ. ಆಸ್ತಿ ಖರಿದಿ ಬಗ್ಗೆ ಚಿಂತನೆಯನ್ನು ಯೋಜನಾಬದ್ಧವಾಗಿ ರೂಪಿಸಲಿದ್ದೀರಿ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರ. ರಾಜಕೀಯವಾಗಿ ದೊಡ್ಡ ಅವಕಾಶಗಳು ಸಿಗಬಹುದು. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ಶುಭದಿನ 4. ಚಂಡಿ ಪಾರಾಯಣ ಮಾಡಿರಿ.




ವಾರದ ಆರಂಭದಲ್ಲಿ ನವೋಲ್ಲಾಸ ಬರುವುದು. ಧರ್ಮ– ದಾನಕ್ಕಾಗಿ ಸಂಪಾದನೆಯ ಒಂದಿಷ್ಟು ಹಣವನ್ನು ಖರ್ಚು ಮಾಡುತ್ತೀರಿ. ಮಿತ್ರರಿಗೆ ಸಹಾಯ ಮಾಡುವ ಸಂಕಲ್ಪ. ಹಲವು ದಿನಗಳ ಜಾಡ್ಯ ಬಗೆಹರೆಯುವುದು. ಹೊಟ್ಟೆನೋವಿನ ಕಾಟ ಕಾಡದೆ ಬಿಡುವುದಿಲ್ಲ. ಮನೆಯಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಲಿದೆ. ಶುಭದಿನ 30. ಕೆಂಪು ಹವಳ ಧಾರಣೆ ಮಾಡಿರಿ. ಶಿವ ಕವಚ ಓದಿರಿ.




ಆಕಸ್ಮಿಕ ಖರ್ಚು ಹೆಚ್ಚಾಗಲಿದೆ. ಕಾಲಿಗೆ ನೋವು ಉಂಟಾಗುವ ಸಂಭವವಿದ್ದು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಅಪವಾದದ ಭಯ ನಿಮ್ಮನ್ನು ಕಾಡಬಹುದು. ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವ ಅಪಾಯವ ಇದೆ. ಆದರೆ ವ್ಯಾಪಾರದಲ್ಲಿ ಅಧಿಕ ಲಾಭ ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಶುಭದಿನ 1. ಮಾರುತಿ ಉಪಾಸನೆ ಪೂಜೆ ಮಾಡಿರಿ.




ವೃತ್ತಿ ವ್ಯವಹಾರದಲ್ಲಿ ಲಾಭ ವ್ಯಾವಹಾರಿಕ ಅನುಕೂಲತೆ. ಸರಕಾರಿ ಕೆಲಸಗಳು ಶೀಘ್ರದಲ್ಲಿ ಆಗುವುವು. ತಂದೆ– ತಾಯಿಯವರ ಆರೋಗ್ಯದಲ್ಲಿ ಸುಧಾರಣೆ ಕಂಡುಬರಲಿದೆ. ಮಾನ, ಮನ್ನಣೆ ದೊರೆಯುವುದು. ದೂರ ಪ್ರವಾಸ ಸಂಭವ ಕಲಾವಿದರಿಗೆ ಸಂಗೀತಗಾರರಿಗೆ ಒಳ್ಳೆಯ ಅವಕಾಶಗಳು ಈ ವಾರ ಸಿಗಲಿವೆ. ಶುಭದಿನ 31. ಚಾಮುಂಡಿ ಸ್ತುತಿ ವನದುರ್ಗಾ ಜಪ ಮಾಡಿರಿ.




ನಿರೀಕ್ಷಿತ ಅಧಿಕಾರ ಸಕಾಲಕ್ಕೆ ಸಿಗಲಿದೆ. ಅಧಿಕಾರಿಗಳಿಗೆ ಪದೋನ್ನತಿ ಈ ವಾರ ಲಭಿಸುವ ಸಾಧ್ಯತೆ ಇದೆ. ಬರಬೇಕಾಗಿರುವ ಹಣ ಬಾಕಿ ಹಣ ಬರುತ್ತದೆ. ಹೆಂಡತಿಯ ತಿರುಗಾಟ ಹೆಚ್ಚಾಗಬಹುದು. ಆರೋಗ್ಯದಲ್ಲಿ ಯಾವುದೇ ತೊಂದರೆ ಕಾಡುವುದಿಲ್ಲ. ಕೌಟುಂಬಿಕವಾಗಿ ಆಗುವ ಅಧಿಕ ಖರ್ಚು ಚಿಂತೆಯನ್ನು ಉಂಟುಮಾಡುತ್ತದೆ. ಶುಭದಿನ 29. ಗುರು ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.




ಮಕ್ಕಳು ವಿದೇಶ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಆಕಸ್ಮಾತ್ ವಸ್ತು ಲಾಭವಾಗಲಿದೆ. ಕಣ್ಣು ಅಥವಾ ಕಿವಿಯಲ್ಲಿ ನೋವು ಕಾಣಿಸಬಹುದು. ಮನೆಯ ಹೊರಗಡೆಯೇ ಹೆಚ್ಚು ಇರಬೇಕಾಗಬಹುದು. ನದಿಯ ಪಾತ್ರದಲ್ಲಿ ಪ್ರವಾಸ ಮಾಡುವಾಗ ಎಚ್ಚರವಹಿಸಿ. ಸಭೆ ಸಮಾರಂಭಗಳಲ್ಲಿ ನಿಮಗೆ ಗೌರವ ಸಿಗಲಿದೆ. ಉತ್ತಮ ಭಾಷಣ ಮಾಡುವಿರಿ. ಶುಭದಿನ 2. ಆದಿತ್ಯ ಹೃದಯ ಪಠಿಸಿರಿ.




ತಾಯಿಗೆ ಆಕಸ್ಮಾತ್ ಬೇನೆ. ಜಮೀನಿನ ಕೆಲಸಗಾರರು ಕೈಕೊಡುವರು. ವಾಹನ ಅಪಘಾತದಲ್ಲಿ ಭಯ ಕಾಡಬಹುದು. ಮಿತ್ರರಿಂದಲೂ ಅಪವಾದ ಸಾಧ್ಯತೆ ಇದೆ. ಸ್ಪರ್ಧಾತ್ಮಕ ವಿಷಯದಲ್ಲಿ ಅಚಾನಕ್ ಯಶಸ್ಸು ಸಿಗಬಹುದು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ. ಸ್ಟೇಶನರಿ ಖರೀದಿಯಲ್ಲಿ ಲಾಭ. ನೆಂಟರ ಆಗಮನ. ಶುಭದಿನ 1. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಅಧಿಕಾರಿಗಳಿಗೆ ಪೂರ್ವದಿಕ್ಕಿಗೆ ವರ್ಗಾವಣೆ ಆಗುವ ಸಾಧ್ಯತೆ ಇದೆ. ಸ್ತ್ರೀಯರಿಗೆ ಅನಾರೋಗ್ಯ ಕಾಡಬಹುದು. ಮನೆ ಬದಲಾವಣೆ ಪ್ರಕ್ರಿಯೆ ಮುಂದುವರಿಯಲಿದೆ. ವಾರಾಂತ್ಯದಲ್ಲಿ ಧನಲಾಭ. ಮನೆಕೆಲಸದವರು ಬರುತ್ತಾರೆ. ಸ್ಪರ್ಧೆಗಳಲ್ಲಿ ಯಶಸ್ಸು ಸಿಗುವುದಿಲ್ಲ. ಕೆಂಪುಬಣ್ಣದ ಯಂತ್ರಗಳ ಖರೀದಿಗೆ ಸುಸಮಯ. ಶುಭದಿನ 30. ವಿಷ್ಣು ಸಹಸ್ರನಾಮ ಪಠಿಸಿರಿ.




ಕುಟುಂಬ ಸದಸ್ಯರಲ್ಲಿಯೇ ವಿರೋಧ ವ್ಯಕ್ತವಾಗುವುದು. ಪ್ರಯತ್ನ ಪೂರ್ವಕವಾಗಿ ಬರಬೇಕಾದ ಬಾಕಿ ಹಣವನ್ನು ವಸೂಲಿ ಮಾಡಿಕೊಳ್ಳಲಿದ್ದೀರಿ. ಮಕ್ಕಳು ಹೆಸರುಗಳಿಸುವರು. ಷೇರು ವ್ಯವಹಾರಗಳಲ್ಲಿ ಅಧಿಕ ಲಾಭ ಸಿಗಲಿದೆ. ಹೃದಯ ಸಂಬಂಧಿ ಕಾಯಿಲೆ ಇರುವವರು ಎಚ್ಚರಿಕೆಯಿಂದಿರಿ. ಚಿಕ್ಕ ಪ್ರವಾಸ. ಶುಭದಿನ 31. ಹನಮಾನ್ ಚಾಲಿಸ್ ಪಠಿಸಿರಿ.